**ಓ.ಎಸ್. ನಂ. 108/2024** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 7.11.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಾವಆಸ್ತಿಗೆ ಸಂಬಂಧಿಸಿದ ಗಣಕೀಕೃತ ಪಹಣಿಯನ್ನು ನಿಪಿ1 ಎಂದು, ನನ್ನ ಹಾಗೂ ಆನಂದ ಎಂಬುವವರ ಮದುವೆಯ ಆಮಂತ್ರಣ ಪತ್ರಿಕೆಯನ್ನು ನಿಪಿ2 ಎಂದು, ನನ್ನ ಅತ್ತೆಯಾದ ಕಮಲಮ್ಮರವರ ಮರಣ ಪ್ರಮಾಣಪತ್ರವನ್ನು ನಿಪಿ3 ಎಂದು, ನನ್ನ ಗಂಡನಾದ ಆನಂದ ರವರ ಮರಣ ಪ್ರಮಾಣಪತ್ರವನ್ನು ನಿಪಿ4 ಎಂದು, ದಿನಾಂಕ 16.3.2024 ರಂದು ಪ್ರತಿವಾದಿಗೆ ವಕೀಲರ ಮೂಲಕ ನೀಡಿದ ನೋಟಿಸಿನ ಪ್ರತಿಯನ್ನು ನಿಪಿ5 ಎಂದು, ಎರಡು ಅಂಚೆ ರಶೀದಿಗಳನ್ನು ನಿಪಿ6 ಮತ್ತು ನಿಪಿ7 ಎಂದು, ಎರಡು ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ8 ಮತ್ತು ನಿಪಿ9 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.